

ಎಂದಿಗೂ ತಪ್ಪದ ಗುರಿ

ಇಸವಿ 1999, ಪಾಕಿಸ್ತಾನಿ ಪಡೆಗಳು ಭಾರತದೊಳಕ್ಕೆ ನುಗ್ಗಿ ನಿಂತ ಸಮಯ. ಭೂಸೇನೆಯ ಅಧಿಕಾರಿ ಕರ್ನಲ್ ಬಿಕ್ರಮ್ ಸಿಂಗ್ ಮಲ್ಲಿಕ್ ಸರಹದ್ದಿನಲ್ಲಿ, ಕೊರೆವ ತೀವ್ರ ಚಳಿಯ ಕಾರ್ಗಿಲ್ ಎತ್ತರದಲ್ಲಿ ದೇಶ ರಕ್ಷಣೆಗೆ ಹೋರಾಡುತ್ತಿದ್ದ ಸಮಯ. ಇತ್ತ ಅವರ ಪತ್ನಿ ದೀಪಾ ಮಲ್ಲಿಕ್ ಬದುಕುಸಾವಿನ ನಡುವೆ ತಮ್ಮದೇ ಹೋರಾಟದಲ್ಲಿ ಆಪರೇಷನ್ ಕೊಠಡಿಯನ್ನು ಹೊಕ್ಕಿದ್ದರು. 183 ಹೊಲಿಗೆಗಳ ನಂತರ ದೀಪಾ ಅವರ ಎದೆಯ ಭಾಗದಿಂದ ಕೆಳಗಿದ್ದ ದೇಹವೆಲ್ಲ ನಿರ್ಜೀವವಾಗಿತ್ತು.

ಕಾರ್ಗಿಲ್ ಯುದ್ಧದಲ್ಲಿ ಭಾರತ ಗೆದ್ದಿತ್ತು. ಬಿಕ್ರಮ್ ಸಿಂಗ್ ವಿಜಯಿಯಾಗಿ ಮನೆಗೆ ಹಿಂತಿರುಗಿದ್ದರು. ಆದರೆ ದೀಪಾ ಅವರ ಬದುಕಿನ ಕಾಳಗ ಆಗಷ್ಟೇ ಆರಂಭವಾಗಿತ್ತು. ಬಾಲ್ಯದಿಂದಲೂ ಕ್ರೀಡೆಯಲ್ಲಿ ಅಗಾಧ ಆಸಕ್ತಿಯಿದ್ದು, ಕಿಶೋರದಿಂದಲೂ ಬೈಕ್ ಓಡಿಸುತ್ತಿದ್ದ, ಹೊರಾಂಗಣದ ಎಲ್ಲ ಚಟುವಟಿಕೆಗಳಲ್ಲಿ ಉತ್ಸಾಹದ ಬುಗ್ಗೆಯಾಗಿ ತೊಡಗಿದ್ದ ದೀಪಾ, ಗಾಲಿಕುರ್ಚಿಯಲ್ಲಿ ಬಂಧಿಯಾಗಿದ್ದರು. ಈ ಬಗೆಯ ದುರಂತ ಮೊದಲ ಬಾರಿಗೆ ಆ ಮನೆಗೆ ಭೇಟಿ ಕೊಟ್ಟಿರಲಿಲ್ಲ. ಅವರ ಮಗಳು ದೇವಿಕಾ, ಒಂದೆರಡು ವರ್ಷದ ಮಗುವಾಗಿದ್ದಾಗಲೇ ಭಯಂಕರ ಅಪಘಾತಕ್ಕೆ ಈಡಾಗಿ, ದೇಹದ ಎಡಭಾಗದ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿದ್ದಳು. ಒಂದೇ ಮನೆಯಲ್ಲಿ ತಾಯಿ ಮತ್ತು ಮಗಳು ಅಂಗವಿಕಲರು. ಆದರೆ ತಮ್ಮ ವಿಕಲಾಂಗವನ್ನೇ 'ದಿವ್ಯಾಂಗ'ವಾಗಿಸಿದ ರೋಮಾಂಚನದ ಕಥೆ, ಈ ಛಲ ಬಿಡದ ತಾಯಿಮಗಳದು.

ಕ್ರೀಡೆಯಲ್ಲಿ ಒಂದಿನಿತೂ ಆಸಕ್ತಿ ಇಲ್ಲದ ನನಗೆ, 'ಕ್ರೀಡೆ, ಓಟದ ಮೈದಾನದಲ್ಲಿ ಉಸಿರುಕಟ್ಟಿ ಓಡುವ ಸ್ಪರ್ಧೆಯಲ್ಲ, ಗೆಲ್ಲುವ ಪದಕಗಳಲ್ಲ; ಕ್ರೀಡಾ ಮನೋಭಾವ ನಾವು ಬದುಕುವ ಪರಿ, ಅದು ಬದುಕನ್ನು ಎದುರಿಸುವ ಸ್ಪೋರ್ಟಿವ್ ರೀತಿ. ಅದೆಷ್ಟೇ ಅಡೆತಡೆಗಳು ಎದುರಾದರೂ ಬಿಡದೆ ಜಿಗಿದು ಹಾರಿ ಗುರಿಯತ್ತ ಬಲವೆಲ್ಲವನ್ನೂ ಕೂಡಿಸಿ ಸಾಗುವ ಆತ್ಮವಿಶ್ವಾಸದ ಪಯಣ. ಬದುಕು ಕೆಡವಿ ಬೀಳಿಸಿದರೂ, ಕೊಡವಿ ಮೇಲೆದ್ದು ಮುನ್ನಡೆಯುವ ಜೀವನೋತ್ಸಾಹದ ಸಂಭ್ರಮ' ಎಂದು ಮನವರಿಕೆ ಮಾಡಿದವರು ದೀಪಾ ಮಲ್ಲಿಕ್.

ಕಳೆದ ವರ್ಷ 'ಸೆಲೆಬ್ರೇಟಿಂಗ್ 21 ಗ್ಲೋರಿಯಸ್ ಇಯರ್ಸ್ ಆನ್ ಮೈ ವಿಲ್ ಚೇರ್' ಎಂದು ದೀಪಾ ಟ್ವೀಟ್ ಮಾಡಿದರು. 'ಈ ದಿನ ನಾನು ಎದೆಯ ಕೆಳಗೆ ಪ್ಯಾರಲೈಸ್ ಆದ ದೇಹದೊಡನೆ ಮರುಹುಟ್ಟು ಪಡೆದಿದ್ದೆ' ಎಂದಿದ್ದರು. ದೀಪಾ 'ಪ್ಯಾರಲಿಂಪಿಕ್ಸ್'ನಲ್ಲಿ ಪದಕ ಗೆದ್ದ ಭಾರತದ ಪ್ರಥಮ ಮಹಿಳಾ ಕ್ರೀಡಾಪಟು. ಅಷ್ಟು ಚಿಕ್ಕ ವಯಸ್ಸಿಗೆ ತಲೆಗೆ ಪೆಟ್ಟು ಬಿದ್ದ ಮಗುವನ್ನು ದೈಹಿಕವಾಗಿ, ಮಾನಸಿಕವಾಗಿ ದೃಢವಾಗಿ ಬೆಳೆಸಿ ಕನಸುಗಳ ಬೆನ್ನತ್ತುವಂತೆ ಮಾಡಿದ ತಾಯಿ ಈಕೆ. ಈಗಷ್ಟೇ ಏಪ್ರಿಲ್ 2021ರಲ್ಲಿ, ದೀಪಾ ಮಲ್ಲಿಕ್ ಅವರನ್ನು 'ಸ್ಪೋರ್ಟ್ಸ್‌ಸ್ಟಾರ್ ಏಸೆಸ್' ಪ್ರಶಸ್ತಿ ಸಮಾರಂಭದಲ್ಲಿ, ಪರ್ಯಾಯ ಕ್ರೀಡೆಗಳಲ್ಲಿ 'ದಶಕದ ಮಹಿಳಾ ಕ್ರೀಡಾಪಟು' ಎಂದು ಘೋಷಿಸಲಾಗಿದೆ. ಭಾರತೀಯ ಕ್ರೀಡಾರಂಗದ ದಿಗ್ಗಜರನ್ನು ಗೌರವಿಸುವ ಸಮಾರಂಭವಿದು. ಮೇ 7 'ವರ್ಲ್ಡ್ ಅಥ್ಲೆಟಿಕ್ಸ್ ಡೇ' ಮತ್ತು ಮೇ 9 'ವಿಶ್ವ ತಾಯಂದಿರ ದಿನ'. ತಮ್ಮ 'ವ್ಹೀಲ್ ಚೇರ್' ಅನ್ನು 'ವಿಲ್ ಚೇರ್' ಆಗಿಸಿ ಬದುಕುತ್ತಿರುವ ದೀಪಾ ಅವರ ಸಂಭ್ರಮದ ಬದುಕನ್ನು ಅರಿಯಲು ಇದು ತಕ್ಕ ಸಮಯ. ಇದು ಬದುಕನ್ನು ಇನ್ನಿಲ್ಲದ ಹಾಗೆ ಪ್ರೀತಿಸಲು ಪ್ರೇರೇಪಿಸುವ ಏಕ್ ಅನೋಖೀ ಪ್ರೇಮ್ ಕಹಾನಿ.

### ಸಾಹಸಿ ಮಹಿಳೆ

ಇಸವಿ 2011ರ ಮಾರ್ಚ್ ತಿಂಗಳು. ದಿಲ್ಲಿಯಲ್ಲಿ ಸೇನಾ ಮೀಟಿಂಗ್ ಮುಗಿಸಿ ಹೊರಬಂದು ಟ್ಯಾಕ್ಸಿಗೆ ಕಾಯುತ್ತಿದ್ದೆ. ನನ್ನೊಡನೆ ಮೀಟಿಂಗ್‌ನಲ್ಲಿ ಭಾಗವಹಿಸಿದ್ದ ಭೂಸೇನೆಯ ಅಧಿಕಾರಿಗಳಿದ್ದರು. ಅದೇ ದಿನ ಬೆಳಗ್ಗೆ ಮೊದಲ ಬಾರಿಗೆ ನಾನು ದಿಲ್ಲಿಯ ದಿನಪತ್ರಿಕೆಯಲ್ಲಿ ದೀಪಾ ಮಲ್ಲಿಕ್ ಅವರ ಹೆಸರನ್ನು ನೋಡಿದ್ದೆ. ಆ ದಿನ ಅವರಿಗೆ 'ಸ್ತ್ರೀಶಕ್ತಿ' ಪುರಸ್ಕಾರ ನೀಡುವರೆಂಬ ವರದಿ ಅಲ್ಲಿತ್ತು. ಆದರೆ ಹೆಚ್ಚಿನ ವಿವರ ಇರಲಿಲ್ಲ. ಇಲ್ಲಿ ಭೂಸೇನೆಯ ಓರ್ವ ಅಧಿಕಾರಿ ದೀಪಾ ಅವರ ಹೆಸರನ್ನು ಉಲ್ಲೇಖಿಸಿದಾಗ ನಾನು ಕುತೂಹಲದಿಂದ ಅವರ ಬಗ್ಗೆ ಕೇಳಿದೆ. ಅವರು ಭೂಪಡೆಯ ಕರ್ನಲ್ ಮಲ್ಲಿಕ್ ಅವರ ಪತ್ನಿ ಎಂದು ತಿಳಿಸಿದರು. ದೀಪಾ ಸೊಂಟದ ಕೆಳಗೆ ಸ್ವಾಧೀನವಿಲ್ಲದಿದ್ದರೂ, 'ರೈಡ್ ದಿ ಹಿಮಾಲಯ' ರ್‍ಯಾಲಿಯಲ್ಲಿ ಭಾಗಿಯಾದ ವಿಷಯ ತಿಳಿಸಿದ್ದರು. ನನಗೆ ಅಚ್ಚರಿಯಾಗಿತ್ತು. ಆಕೆ 'ಎಂ.ಟಿ.ವಿ. ರೋಡೀಸ್'ನಲ್ಲಿ ಬಂದಿದ್ದರೂ ನಾನು ಆ ಜನಪ್ರಿಯ ಕಾರ್ಯಕ್ರಮವನ್ನು ನೋಡಿರಲಿಲ್ಲ. ನನ್ನಂತೆ ಬಹಳಷ್ಟು ಜನರಿಗೆ ದೀಪಾ ಯಾರೆಂದು ತಿಳಿದೇ ಇರಲಿಲ್ಲ.

ಹಾಗೆಂದೇ ಹಿಂತಿರುಗಿ ಬಂದಾಗ, ಒಂದು ದಶಕದ ಹಿಂದೆ ಈ ಸಾಹಸಿ ಮಹಿಳೆಯ ಬಗ್ಗೆ ಸಣ್ಣ ಲೇಖನ ಬರೆದಿದ್ದೆ. ಆದರೆ ಅವರನ್ನು ಎಂದಾದರೂ ಭೇಟಿಯಾಗಿ ಅವರ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ನನ್ನ ಆಸೆ, ಕಡೆಗೂ ಈಡೇರಿತ್ತು 2015ರಲ್ಲಿ. ಕಳೆದ ಈ ಐದು ವರ್ಷಗಳಲ್ಲಿ ಅವರನ್ನು ಕುರಿತು ಬಹಳಷ್ಟು ವಿಷಯಗಳನ್ನು ತಿಳಿಯಲು ಸಾಧ್ಯವಾಯಿತು.

'ಎಲ್ಲವೂ ಸ್ವಸ್ಥವಿದ್ದಾಗ, ಎಲ್ಲವೂ ನೇರವಿದ್ದಾಗ ಮಾತ್ರ ನಾನು ಬದುಕನ್ನು ಬದುಕುತ್ತೇನೆ. ಅಂಗವಿಕಲತೆ, ಅಸಾಧ್ಯ ರೋಗದೊಡನೆ ಬದುಕನ್ನು ಸವಿಯಲು ಹೇಗೆ ಸಾಧ್ಯ?' ಎಂದು ಕುಸಿದು ಕುಳಿತವರನ್ನು ನಾವು ನೋಡಿದ್ದೇವೆ. ಆದರೆ